# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 37 ಪ್ರಾ.ಸಾ. : 26**

| | | |
|---|---|---|
| ಸಾಕ್ಷಿಯ ಹೆಸರು | : | ಸಲೀಂ ಬಿ. ಮೊಖಾಶಿ |
| ತಂದೆಯ ಹೆಸರು | : | ಭಾಷಾಸಾಬ್ ಮೊಖಾಶಿ |
| ವಯಸ್ಸು | : | 36 ವರ್ಷ |
| ಕೆಲಸ | : | ಸಿ.ಪಿ.ಸಿ.–1052, ಅಂಕೋಲಾ ಪೊಲೀಸ್ ಠಾಣೆ |
| ವಾಸ | : | ಅಂಕೋಲಾ |

**ದಿನಾಂಕಃ 09.02.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

1. 2017 ರಿಂದ 2022 ರ ವರೆಗೆ ನಾನು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಕಂಪ್ಯೂಟರ್ ಬಳಸುವ ಜ್ಞಾನವನ್ನು ಹೊಂದಿರುತ್ತೇನೆ ಹಾಗೂ ಈ ಬಗ್ಗೆ ಇಲಾಖಾ ವತಿಯಿಂದ ತರಬೇತಿಯನ್ನು ಪಡೆದಿರುತ್ತೇನೆ. ಈ ಪ್ರಕರಣದಲ್ಲಿ ದಿನಾಂಕ 04.05.2021 ರಂದು ಬಟ್ಟೆ ಜಪ್ತುಪಂಚನಾಮೆಯ ಕಾಲಕ್ಕೆ ತನಿಖಾಧಿಕಾರಿಯಾದ ಚಾಸಾ–39 ರವರ ಸೂಚನೆಯಂತೆ, ಪೊಲೀಸ್ ವೃತ್ತ ನಿರೀಕ್ಷಕರು ಕಛೇರಿಯಲ್ಲಿ ಹಾಜರಿದ್ದು, ನಿ.ಪಿ.36 ನ್ನು ಜಪ್ತುಪಂಚನಾಮೆಯನ್ನು ಠಾಣೆಯಿಂದ ಪೂರೈಸಿದ ಲ್ಯಾಪ್ ಟಾಪ್ ಮೂಲಕ ಗಣಕೀಕರಣ ಮಾಡಿ, ಪ್ರಿಂಟ್ ಮಾಡಿ, ನಂತರ ಅದಕ್ಕೆ ನನ್ನ ಸಹಿ ಮಾಡಿ, ಅದನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ನಿಪಿ–36 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–36(ಸಿ) ಎಂದು ಗುರುತಿಸಲಾಯಿತು.

2. ಆನಂತರ ದಿನಾಂಕ 04.06.2021 ರಂದು ಆರೋಪಿ ಮತ್ತು ಸಾಕ್ಷಿದಾರರ ಫೋಟೊ ಜಪ್ತುಪಂಚನಾಮೆ ಕಾಲಕ್ಕೆ ತನಿಖಾಧಿಕಾರಿಯ ಸೂಚನೆಯಂತೆ, ನಿ.ಪಿ.46 ನ್ನು

ಜಪ್ತುಪಂಚನಾಮೆಯನ್ನು ಠಾಣೆಯಿಂದ ಪೂರೈಸಿದ ಲ್ಯಾಪ್ ಟಾಪ್ ಮೂಲಕ ಗಣಕೀಕರಣ ಮಾಡಿ, ಪ್ರಿಂಟ್ ಮಾಡಿ, ನಂತರ ಅದಕ್ಕೆ ನನ್ನ ಸಹಿ ಮಾಡಿ, ಅದನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ನಿಪಿ–46 ಪಂಚನಾಮೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–46(ಸಿ) ಎಂದು ಗುರುತಿಸಲಾಯಿತು. ಆನಂತರ ಈ ಪ್ರಕರಣದಲ್ಲಿ ತನಿಖೆಗೆ ಸಹಾಯ ಮಾಡಿದ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆ ಗಣಕೀಕರಣ ಮಾಡುವಾಗ ಆರೋಪಿತನ ಬಟ್ಟೆ ಜಪ್ತುಪಂಚನಾಮೆಯ ಬಗ್ಗೆ ತಪ್ಪಾಗಿ ನಮೂದಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ ರವರಿಂದಃ–**

3. ನನಗೆ ಕಂಪ್ಯೂಟರ್ ತರಬೇತಿಯಾದ ಬಗ್ಗೆ ಯಾವುದೇ ಪ್ರಮಾಣ ಪತ್ರ ಇರುವುದಿಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ಜಪ್ತುಪಂಚನಾಮೆಗಳನ್ನು ಗಣಕೀಕರಣ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ